ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಐವನ್ ಡಿ' ಸೋಜಾ ಇವರು ನಿಯಮ 72 ರಡಿ

ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಉತ್ತರ:

**ವಿಷಯ:**

**ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರವಾನಿಗೆ ಇಲ್ಲದೇ ಅಕ್ರಮವಾಗಿ ಮರಳುಗಾರಿಕೆ ಭಾರೀ ದೊಡ್ಡಮಟ್ಟದಲ್ಲಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಡೆಯುತ್ತಿದ್ದರು ಜಿಲ್ಲಾಡಳಿತ ಇದಕ್ಕೆ ಸಹಕರಿಸುತ್ತಿರುವ ಬಗ್ಗೆ ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರ ಗಮನ ಸೆಳೆಯ ಬಯಸುತ್ತೇನೆ.**

**ಉತ್ತರ:**

ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ ನದಿ ಪಾತ್ರಗಳಲ್ಲಿ 14 ಮರಳು ಬ್ಲಾಕ್‌ಗಳನ್ನು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 31-ZB-A ರಂತೆ ಜಿಲ್ಲೆಯ ಸಾಂಪ್ರದಾಯಿಕವಾಗಿ ಮರಳು ತೆಗೆಯುವ ಸಮುದಾಯದವರಿಗೆ ಸಾರ್ವಜನಿಕ ಟೆಂಡರ್ ಕಂ ಹರಾಜು ಮೂಲಕ 05 ವರ್ಷಗಳ ಅವಧಿಗೆ ಮರಳು ಗಣಿ ಗುತ್ತಿಗೆ ಮಂಜೂರು ಮಾಡಲಾಗಿರುತ್ತದೆ. ಸರ್ಕಾರಿ ಕಾಮಗಾರಿಗಳಿಗೆ 04 ಮರಳು ಬ್ಲಾಕ್‌ಗಳನ್ನು ಸಂಬಂಧಪಟ್ಟ ಇಲಾಖೆ / ಸಂಸ್ಥೆಗಳಿಗೆ ಮಂಜೂರು ಮಾಡಲಾಗಿರುತ್ತದೆ. 30 ಮರಳು ಬ್ಲಾಕ್‌ಗಳನ್ನು ಸಾರ್ವಜನಿಕ ಟೆಂಡರ್ ಕಂ ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿರುತ್ತದೆ. ಪ್ರಸ್ತುತ ಹರಾಜು ಮೂಲಕ ಮಂಜೂರಾದ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮೀಸಲಿರಿಸಿದ ಮರಳು ಬ್ಲಾಕ್‌ಗಳಿಂದ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳನ್ನು ಪೂರೈಕೆಸಲಾಗುತ್ತಿರುತ್ತದೆ.

2018–19 ನೇ ಸಾಲಿನಲ್ಲಿ CRZ ವ್ಯಾಪ್ತಿಯಲ್ಲಿ ಒಟ್ಟು 22 ಮರಳು ದಿಬ್ಬಗಳಿಂದ ಮರಳು ತೆರವುಗೊಳಿಸಲು KCZMA ಯಿಂದ ಅನುಮತಿ ನೀಡಲಾಗಿದ್ದು, ಸದರಿ ಮರಳು ದಿಬ್ಬಗಳಲ್ಲಿ ಮರಳು ತೆಗೆಯಲು 105 ತಾತ್ಕಾಲಿಕ ಪರವಾನಿಗೆ ನೀಡಲಾಗಿರುತ್ತದೆ. ಸದರಿ ಮರಳು ದಿಬ್ಬಗಳಿಂದ 5,57,252 ಮೆಟ್ರಿಕ್ ಟನ್ ಪ್ರಮಾಣದ ಮರಳನ್ನು ಜಿಲ್ಲಾ ಮರಳು ಸಮಿತಿಯು ನಿಗದಿಪಡಿಸಿದ ರೂ.550/– ರ (ಸದರಿ ದರದಲ್ಲಿ ರಾಜಧನ, ಎ.ಎ.ಪಿ.ಪಿ, ಡಿ.ಎಂ.ಎಫ್ ಮತ್ತು ಇತರೆ ವೆಚ್ಚವನ್ನು ಒಳಗೊಂಡಿರುತ್ತದೆ) ಮರಳು ಮಾರಾಟದ ದರದಂತೆ ವಿಲೇಪಡಿಸಲಾಗಿರುತ್ತದೆ.

ಅಲ್ಲದೆ ಪ್ರವಾಹದಿಂದ ನದಿ ಪಾತ್ರದ ಪಕ್ಕದಲ್ಲಿರುವ ಕೃಷಿ ಭೂಮಿಯಲ್ಲಿ ಪ್ರವಾಹದಿಂದ ಸಂಗ್ರಹವಾಗಿರುವ ಮರಳನ್ನು ತೆಗೆಯಲು ಒಟ್ಟು 19 ಜನರಿಗೆ ಅನುಮತಿ ನೀಡಲಾಗಿದ್ದು, 18,200 ಮೆಟ್ರಿಕ್ ಟನ್ ಪ್ರಮಾಣದ ಮರಳು ವಿಲೇವಾರಿಯಾಗಿರುತ್ತದೆ. ಇದರಿಂದ ಒಟ್ಟು ರೂ. 12.34 ಲಕ್ಷ ರಾಜಸ್ವ ಸಂಗ್ರಹಣೆಯಾಗಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ CRZ ನದಿ ಪಾತ್ರಗಳ ವ್ಯಾಪ್ತಿಯಲ್ಲಿ ಮರಳು ದಿಬ್ಬಗಳನ್ನು ಗುರುತಿಸಲು ಬ್ಯಾತಿಮೆಟ್ರಿಕ್ ಸರ್ವೇ ನಡೆಸಿ, ವರದಿಯನ್ನು NITK (National Institute of Technology Karnataka) ಸುರತ್ಕಲ್ ರವರಿಗೆ ಸಲ್ಲಿಸಿದ್ದು, ತಾಂತ್ರಿಕ ವರದಿ ಪಡೆದ ನಂತರ 07 ಜನ ಸದಸ್ಯರ ಜಿಲ್ಲಾ ಮರಳು ಸಮಿತಿಯಲ್ಲಿ ಮಂಡಿಸಿ, ಪರಿಸರ ಅನುಮತಿ ಪತ್ರ ಪಡೆದು ಶೀಘ್ರದಲ್ಲಿಯೇ ಮರಳು ದಿಬ್ಬಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

. . . 2

2017–18 ಮತ್ತು 2019–20 ನೇ ಸಾಲಿನ ಫೆಬ್ರವರಿ–2020 ರ ಅಂತ್ಯದವರೆಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳಡಿಯಲ್ಲಿ ಜಿಲ್ಲಾ ಮರಳು ಸಮಿತಿಯಿಂದ ವಸೂಲಿ ಮಾಡಿದ ದಂಡ, ದಾಖಲಿಸಲಾದ ಮೊಕದ್ದಮೆಗಳ ವಿವರಗಳು ಈ ಕೆಳಕಂಡಂತಿರುತ್ತವೆ.

| ವರ್ಷ | ಅನಧಿಕೃತ ಮರಳು ಗಣಿಗಾರಿಕೆ | | | ಅನಧಿಕೃತ ಮರಳು ಸಾಗಾಣಿಕೆ | | |
|---|---|---|---|---|---|---|
| | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಸೂಲಿ ಮಾಡಲಾದ ದಂಡ (ರೂ. ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಸೂಲಿ ಮಾಡಲಾದ ದಂಡ (ರೂ. ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ |
| 2017–18 | – | – | – | 123 | 0.75 | 117 |
| 2018–19 | 01 | – | 01 | 76 | 1.60 | 55 |
| 2019–20 (ಫೆಬ್ರವರಿ ಮಾಹೆವರೆಗೆ) | 01 | – | 01 | 120 | – | 120 |
| ಒಟ್ಟು | 02 | – | 02 | 319 | 2.35 | 292 |

ಮುಂದುವರೆದು, ಅನಧಿಕೃತ ಮರಳು ದಾಸ್ತಾನಿನಡಿ 2017–18 ನೇ ಸಾಲಿನಲ್ಲಿ ಒಟ್ಟು 12,121 ಮೆಟ್ರಿಕ್ ಟನ್ ಮರಳನ್ನು ಸರ್ಕಾರದ ವಶಕ್ಕೆ ಪಡೆದು, ಹರಾಜು ಮೂಲಕ ವಿಲೇವಾರಿ ಮಾಡಿ ರೂ.79,16,232/–ಗಳ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಿಕೊಳ್ಳಲಾಗಿರುತ್ತದೆ. 2018–19 ನೇ ಸಾಲಿನಲ್ಲಿ ಅನಧಿಕೃತ ಮರಳು ದಾಸ್ತಾನಿನಡಿಯಲ್ಲಿ ರೂ. 27.42 ಲಕ್ಷ ದಂಡವನ್ನು ವಸೂಲಿ ಮಾಡಲಾಗಿರುತ್ತದೆ. ಮೇಲ್ಕಂಡಂತೆ, ಅನಧಿಕೃತ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ವಿರುದ್ಧ ನಿಯಮಾನುಸಾರ ಕ್ರಮ ವಹಿಸಲಾಗಿರುತ್ತದೆ. ಅಕ್ರಮ ಮರಳು ಗಣಿಗಾರಿಕೆಯಲ್ಲಿ ಅಧಿಕಾರಿಗಳು ಶಾಮೀಲಾಗಿರುವುದು / ಸಹಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಸಿಐ 118 ಎಂಎಂಎನ್ 2020

(ಸಿ.ಸಿ.ಪಾಟೀಲ)

ಗಣಿ ಮತ್ತು ಭೂವಿಜ್ಞಾನ ಸಚಿವರು